ಪ್ರಜಾವಾಣಿ

# '3 ಸೂತ್ರಗಳ' ಜನಪ್ರಿಯ ಮಾದರಿ

ಪ್ರಸಕ್ತ ಸಾಲಿನ ಬಜೆಟ್ ಮಂಡನೆಗೆ ಪೂರ್ವದಲ್ಲಿ ಸಾಕಷ್ಟು ನಿರೀಕ್ಷೆಗಳನ್ನೂ, ಚರ್ಚೆಗಳನ್ನೂ ಹುಟ್ಟುಹಾಕಿತ್ತು. ಆದರೆ, ಗುರುವಾರ ಬಜೆಟ್ ಮಂಡನೆಯಾಗುತ್ತಿದ್ದಂತೆ ಈ ನಿರೀಕ್ಷೆಗಳೆಲ್ಲ ಹುಸಿಯಾಗಿವೆ.

ತಕ್ಷಣಕ್ಕೆ ಬಜೆಟ್ ಕುರಿತು ಪ್ರತಿಕ್ರಿಯಿಸುವುದಾದರೆ ಇದು ಜನಸಾಮಾನ್ಯರಿಂದ ಬೆಂಬಲ ಪಡೆಯಬೇಕೆಂಬ ರಾಜಕೀಯ ಸಿದ್ಧಾಂತದ ಹಿನ್ನೆಲೆಯಲ್ಲಿ ಯುಪಿಎ ಸರ್ಕಾರ ಮಂಡಿಸಿದ ಚುನಾವಣಾ ಪೂರ್ವ ಬಜೆಟ್. ಇದೊಂದು 'ಜನಪ್ರಿಯ ಮಾದರಿ'ಯೂ ಹೌದು.

ರಾಜಕೀಯ ವಿದ್ಯಾರ್ಥಿಯ ದೃಷ್ಟಿಯಿಂದ ನೋಡಿದರೆ ಕೆಲವು ವಿಷಯಗಳು ತಕ್ಷಣಕ್ಕೆ ನನ್ನ ಗ್ರಹಿಕೆಗೆ ಬರುತ್ತಿವೆ. ಕಾಂಗ್ರೆಸ್ ಪಕ್ಷ ಜೈಪುರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳೇ ಈಗ ಬಜೆಟ್‌ನಲ್ಲಿ ಜಾರಿಯಾಗಿವೆ. ಮುಖ್ಯವಾಗಿ ಮಹಿಳೆ, ಯುವಜನತೆ ಮತ್ತು ಬಡವರು ಎಂಬ ಮೂರು ಸೂತ್ರಗಳನ್ನು ಬಜೆಟ್ ಒಳಗೊಂಡಿದೆ. ಈ ಸಂಗತಿಗಳ ಆಧಾರದ ಮೇಲೆ ಸ್ಪಷ್ಟವಾಗಿ ಇದೊಂದು 'ಜನಪ್ರಿಯ ಮಾದರಿ' ಎಂದು ಹೇಳಬಹುದು.

ಸರ್ಕಾರದ ಯೋಜನೆಗಳಿಗೆ ಉದಾರವಾಗಿ ಹಣ ಹರಿಸಲಾಗಿದೆ. ಸಾಮಾಜಿಕ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಹೆಚ್ಚಿನ ನಿಧಿ ಮೀಸಲಿರಿಸಲಾಗಿದೆ. ಮಧ್ಯಮ ವೇತನ ವರ್ಗ ಬಜೆಟ್‌ನಲ್ಲಿ ಆದಾಯ ತೆರಿಗೆ ಮಿತಿ ಹೆಚ್ಚಬಹುದು ಎಂಬ ಭಾರಿ ನಿರೀಕ್ಷೆಯಲ್ಲಿತ್ತು. ಆದರೆ, ಅದು ಹುಸಿಯಾಗಿದೆ.

ಬರಲಿರುವ ಚುನಾವಣೆ ಗಮನದಲ್ಲಿಟ್ಟುಕೊಂಡು ಬಜೆಟ್ ರೂಪಿಸಲಾಗಿದೆ ಎನ್ನುವುದನ್ನು ಈ ಕೆಳಕಂಡ ಅಂಶಗಳ ಮೂಲಕ ತಿಳಿಯಬಹುದು. 1) ಗ್ರಾಮೀಣ ಅಭಿವೃದ್ಧಿಗೆ ನೀಡುವ ಅನುದಾನ ಶೇ 46ರಷ್ಟು ಹೆಚ್ಚಳ. 2) ಕುಡಿಯುವ ನೀರು ಮತ್ತು ನೈರ್ಮಲೀಕರಣಕ್ಕೆ ಗರಿಷ್ಠ ಅನುದಾನ 3)ಮಹಿಳಾ ಸಬಲೀಕರಣಕ್ಕೆ 'ನಿರ್ಭಯ ನಿಧಿ' 5) ಕೃಷಿ ಸಾಲ ಗುರಿ ಹೆಚ್ಚಳ 6) ಆಹಾರ ಭದ್ರತೆ ಪ್ರಸ್ತಾವಕ್ಕೆ ಅನುದಾನ 7) ಜವಾಹರಲಾಲ್ ನೆಹರು ರಾಷ್ಟ್ರೀಯ ಗ್ರಾಮೀಣ ನವೀಕರಣ ಅಭಿಯಾನದ ಅನುದಾನ ಎರಡು ಪಟ್ಟು ಹೆಚ್ಚಳ. ಹೀಗೆ 'ಜನಪ್ರಿಯತೆ'ಯ ಸಿದ್ಧ ಮಾದರಿಯನ್ನೇ ಬಜೆಟ್ ತುಂಬೆಲ್ಲಾ ಸಮರ್ಥವಾಗಿ ಬಳಸಿಕೊಳ್ಳಲಾಗಿದೆ.



## ನಿಜವಾದ ಸವಾಲು

'ಜನಪ್ರಿಯ ಮಾದರಿ' ಬಜೆಟ್ ಘೋಷಣೆಗೆ ಮಾತ್ರ ಸೀಮಿತಗೊಳ್ಳುವುದರಿಂದ ಅನುಷ್ಠಾನ ಹಂತದಲ್ಲಿ ಇದರಿಂದ ಹೆಚ್ಚಿನದೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಹಿಂದಿನ ಬಜೆಟ್ ಸಾಧನೆಗಳನ್ನು ವಿಶ್ಲೇಷಿಸಿದಾಗ ಈ ಸಂಗತಿ ಮನದಟ್ಟಾಗುತ್ತದೆ. ಮಹಾಲೇಖಪಾಲರ (ಸಿಎಜಿ) ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ ಬಜೆಟ್ ಅನುದಾನ ಮತ್ತು ವೆಚ್ಚದ ನಡುವಿನ ಅಂತರವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಸಮಾಜ ಕಲ್ಯಾಣ ಮತ್ತು ಅಭಿವೃದ್ಧಿಗೆ ಯೋಜನೆಗಳಿಗೆ ವ್ಯಯವಾಗಿರುವ ಮೊತ್ತಕ್ಕೆ ಬಜೆಟ್‌ನಲ್ಲಿ ಯಾವುದೇ ಪುರಾವೆ ಒದಗಿಲ್ಲ. ಅನುದಾನ ಮತ್ತು ವೆಚ್ಚದ ನಡುವಿನ ಅಂತರ ತಗ್ಗಿಸುವ ಕುರಿತೂ ಏನನ್ನೂ ಹೇಳಲಾಗಿಲ್ಲ.

2013–14ನೇ ಸಾಲಿನ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆ ಅಂತರವನ್ನು ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ (ಜಿಡಿಪಿ) ಶೇ 4.8ಕ್ಕೆ ಮತ್ತು ವರ್ತಮಾನ ಕೊರತೆಯನ್ನು ಶೇ 3.3ಕ್ಕೆ ತಗ್ಗಿಸುವ ಗುರಿ ನಿಗದಿಪಡಿಸಲಾಗಿದೆ. ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ಆದರೆ, ಬಜೆಟ್‌ನಲ್ಲಿ ಹಣದುಬ್ಬರ ತಗ್ಗಿಸುವ ನಿಟ್ಟಿನಲ್ಲಿ ಜನಸಾಮಾನ್ಯರಲ್ಲಿ ಭರವಸೆ ಮೂಡಿಸುವ ಯಾವುದೇ ಮಹತ್ವದ ನಿರ್ಧಾರ ತೆಗೆದುಕೊಂಡಿಲ್ಲ. ಇದು ಒಟ್ಟಾರೆ ಆರ್ಥಿಕ ಅಂದಾಜನ್ನೇ ಬುಡಮೇಲು ಮಾಡುವ ಸಂಗತಿ. ವೆಚ್ಚದ ಬಗ್ಗೆ ಯಾವುದೇ ವಿವೇಚನೆ ಇಲ್ಲದ ಈ ಬಜೆಟ್ ಘೋಷಣೆಗಳು ಕಳವಳಕಾರಿ. ಇದು ಅತ್ಯಂತ ಗಂಭೀರ ವಿಷಯ. ವಿಶೇಷವಾಗಿ ಸಂಸ್ಥೆಗಳಿಗೆ ನೀಡುವ ಅನುದಾನ ಕಡಿತ ಮಾಡುವ ಕುರಿತು ಸರ್ಕಾರ ಚಿಂತಿಸಬೇಕು. ಆದರೆ, ಇದಕ್ಕೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

'ಎಲ್ಲರನ್ನೂ ಸಂತೋಷಪಡಿಸಲು' ಮಂಡಿಸುವ ಬಜೆಟ್ ಅಂತಿಮವಾಗಿ ಯಾರಿಗೂ ಯಾವುದೇ ಲಾಭವನ್ನುಂಟು ಮಾಡುವುದಿಲ್ಲ. ಅಷ್ಟೇ ಅಲ್ಲ ಸ್ಪಷ್ಟವಾದ ಶೀರ್ಷಿಕೆಯಿಲ್ಲದ ಈ ಬಜೆಟ್ ಸಾರ್ವಜನಿಕರ ಗಮನವನ್ನೂ ಸೆಳೆಯುವುದಿಲ್ಲ.

ಡಾ. ಸಂದೀಪ್ ಶಾಸ್ತ್ರಿ
ಸಹ ಕುಲಪತಿ, ಜೈನ್ ವಿಶ್ವವಿದ್ಯಾಲಯ